ನಖಾತೆ ಆನಂದರಾವ್, ಬೆಂಗಳೂರು

ಬೆಂಗಳೂರಿನಲ್ಲಿ ಹಂತಹಂತವಾಗಿ ಸಾಯುತ್ತಿರುವ ಕನ್ನಡವನ್ನು ಉಳಿಸಲು ಸೂಕ್ತವಾದ ಸ್ಲೋಗನ್ ಕೊಡಿ...?

ಮೆಟ್ರೋ ಎಂಬ ಒಂದೇ ಪದ ಸಾಕು– ಅನ್ಯ ಭಾಷೆಗಳನ್ನು ಮೆಟ್ರೋ, ಕನ್ನಡದ ಬಲವನ್ನು ಕಟ್ರೋ....!

ಮಹಾವೀರ ಕಾಸರ, ಶಿವಮೊಗ್ಗ

ಸದನದ ಬಾವಿಯಲ್ಲಿ ಏನು ಇರುತ್ತವೆ? ಅವಕಾಶಗಳತ್ತ ಕುಪ್ಪಳಿಸುವ ಕಪ್ಪೆಗಳು!

ಬಿ. ಚಂದ್ರೇಗೌಡ, ಬೆಂಗಳೂರು

ಮದ್ಯಸೇವನೆಯ ನಂತರ ಕೆಲವರಿಗೆ ಆಂಗ್ಲಪದಗಳು ಪುಂಖಾನುಪುಂಖವಾಗಿ ಹೊರಬರಲು ಏನು ಕಾರಣ?

ಒಳಹೋದ ಮದ್ಯ 'ಬ್ರಿಟಿಷರೆ ಹೊಟ್ಟೆ ಬಿಟ್ಟು ತೊಲಗಿ' ಆಂದೋಲನ ಕೈಗೊಳ್ಳುವುದರ ಫಲವಂತೆ.

ಅಮರಯ್ಯಾ ಪತ್ರಿಮಠ, ಸುರಪೂರ

ಓಲ್ಡ್ ಈಸ್ ಗೋಲ್ಡ್ ಎನ್ನುವವರೂ ಹಿರಿಯರನ್ನು ಅಲಕ್ಷಿಸುವುದೇಕೆ?

ಹಿರಿಯರು ಸುರುಟಿ ಮುರುಟಿ ಹೋಗಿರುವುದರಿಂದ ಅವರು ಗೋಲ್ಡ್ ಅಲ್ಲ– ರೋಲ್ಡ್ ಗೋಲ್ಡ್ ಅಂತೆ!

ಪ್ರಶಾಂತ್ ಮಯ್ಯ, ಸಾಗರ

ಸಾವಿಗೆ ಸಾವಿನ ಭಯ ಇಲ್ವಾ?

ಅದಕ್ಕಿಲ್ಲ; ಸಾವಿನ ಸಾವನ್ನು ನಿಯಂತ್ರಿಸಬೇಕಾದ ನಮಗೂ ಇಲ್ಲ. ಸಾವಿನ ಸಾವೇ ಹುಟ್ಟು.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಕಾಲಕ್ಕೆ ಹೊತ್ತು ಎನ್ನುತ್ತಾರಲ್ಲ, ಏಕೆ?

ಪ್ರತಿ ಕ್ಷಣವೂ ನಮ್ಮನ್ನು ಹೊತ್ತು ಸಾಗುವುದರಿಂದ.

ಟಿ.ಎ. ನಾರಾಯಣಮೂರ್ತಿ, ಮೈಸೂರು

ಸುಳ್ಳೇ ಹೇಳದ ವ್ಯಕ್ತಿ ಹಿಮಾಲಯಕ್ಕೆ ಹೋದರೆ ಸಿಗುತ್ತಾನೆಯೆ?

ಅಷ್ಟು ದೂರವೇನು ಬೇಡ; ಹತ್ತಿರ ಇರುವ ಮೂಗರ ಶಾಲೆಯಲ್ಲೇ ಸಿಗುತ್ತಾರೆ.

ಹಾಡ್ಯ ಬ. ಜಯಾನಂದ, ಮೈಸೂರು

ಜೀವನದಲ್ಲಿ ಎಲ್ಲರೂ ಒಂದಿಲ್ಲೊಂದು ಹುಡುಕಾಟ ನಡೆಸುತ್ತಾರಂತೆ. ರಾಜಕಾರಣಿಗಳು?

ಅವರದು ಹುಡುಕಾಟ ಅಲ್ಲ – ಹುಡುಗಾಟ.

ಬಸವಣ್ಣ ಹೊನಕಾಂಡಿ, ಬಸವನಬಾಗೇವಾಡಿ

ಸುಖ, ಶಾಂತಿ, ನೆಮ್ಮದಿ ನಿಮ್ಮೂರಿನ ಕಾಳಸಂತೆಯಲ್ಲಿ ಸಿಗುತ್ತಾ ಶಿವ?

ಸ್ಟಾಕ್ ಕಡಿಮೆ ಇದೆ. ಬೇಗ ಬನ್ನಿ – ಕೊಂಡೊಯ್ಯಲು ನಿಮ್ಮದೇ ಆದ ತೃಪ್ತಿಯ ಚೀಲ ತನ್ನಿ.

ಬೂಕನಕೆರೆ ವಿಜೇಂದ್ರ, ಮೈಸೂರು

ಇಲ್ಲೊಬ್ಬಳು ನಟಸೊಬ್ಬನನ್ನು ಕಲಿಯುಗದ ಕರ್ಣನಿಗೆ ಹೋಲಿಸುತ್ತಾಳಲ್ಲಾ...?

ತಿಳಿಯಿತು. ಕರ್ಣ ಎಂದರೆ ಡಯಾಗೊನಲ್ – ಆ ನಟ ಕುಡಿದಾಗ ಹಾಗೆಯೇ ನಡೆಯುವುದಂತೆ.

ಹೇಮಾವತಿ ಜೈನ್, ಹೂವಿನಹಡಗಲಿ

ಉತ್ತರ ಚೆಲುವೆಯ ಸೌಂದರ್ಯಕ್ಕೆ ದಿನಾ ಎಷ್ಟು ಲೀಟರ್ ನೀರು ಕುಡಿಯುತ್ತೀರಿ ಸಾರ್?

ಓದುಗರ ಪ್ರಶ್ನೆಗಳು ಕುಡಿಸುವಷ್ಟು!

ರವೀಂದ್ರನಾಥ ಯಡಹಳ್ಳಿ, ಬೀಳಗಿ

ಅಂಗೈಯಲ್ಲಿರುವ ರೇಖೆಗೂ, ಲಕ್ಷ್ಮಣರೇಖೆಗೂ ಇರುವ ವ್ಯತ್ಯಾಸವೇನು ಶಿವಾ?

ಇದು ದಿಕ್ಕೂಚಿ; ಅದು ದಿಗ್ಬಂಧನ.

ಲಲಿತ ತೋಂಟಾರಾಧ್ಯ, ಗುಬ್ಬಿ

ಹಿಂದೆ ಸತಿ ಸಹಗಮನ ಪದ್ಧತಿ ಇತ್ತು. ಈಗ?

ಈಗಲೂ ಇದೆ. ಸತಿಪತಿಯರು ಪಕ್ಕಪಕ್ಕ ಕುಳಿತು ಸೀರಿಯಲ್‌ಗಳತ್ತ 'ಸಹ–ಗಮನ' ನೀಡುತ್ತಾರೆ!

ಮೋಹನರಾಜು ಎಸ್.ಎ., ಶಿವಮೊಗ್ಗ

ಕೋಪ ಮನುಷ್ಯನ ಮೊದಲ ಶತ್ರು. ಎರಡನೆಯ ಶತ್ರು ಯಾರು?

ಮೊದಲ ಶತ್ರುವಿನ ಕಾರಣದಿಂದ ಮಾಡಿದ್ದನ್ನು ಉಜ್ಜೀ ಉಜ್ಜೀ ತೋರಿಸುವ ಚಾನಲ್.

ಬಹುಮಾನಿತ ಪ್ರಶ್ನೆ

ಸುಶೀಲಾ ರಾಮಣ್ಣ, ಬೆಂಗಳೂರು

ಬೆಂಗಳೂರು ಅಚ್ಚುಮೆಚ್ಚಿನುವ ಹೊರಗಿನವರು ಕನ್ನಡ ಕಲಿಯುವುದಿಲ್ಲವಲ್ಲಾ...?

ತಪ್ಪು ಅವರದಲ್ಲ; ಕನ್ನಡಿಗರದು. ಅವರು ಕ ಕಲಿಯುವಷ್ಟರಲ್ಲಿ ಇವರು ಕಹೋನಾ ಪ್ಯಾರ್ ಹೈ ಕಲಿತುಬಿಟ್ಟಿರುತ್ತಾರೆ!

ಫಾಲನೇತ್ರ ಸಜ್ಜನ, ಶಿರಸಿ

ದೈವೀ ಗುಣ ಧಾರಣೆ ಮಾಡುವುದು ಹೇಗೆ?

ಯಾವ ದೇವರದು? ದುರ್ಗಿ, ಕಾಳಿಯದಾದರೆ ಸೀರಿಯಲ್ ನೋಡಿ ಕಲಿಯಿರಿ.

ಪೇಂಟರ್ ಪಾಪು, ಸಂತೇಮರಹಳ್ಳಿ

ಸಂಬಂಧಿಕರು ಸಂಪಾದನೆಗೇ ಹೆಚ್ಚು ಬೆಲೆ ಕೊಡುತ್ತಾರೆ. ಏಕೆ?

sum ಬಂಧಿಗಳಾದ್ದರಿಂದ.

ಕಾಳೀಹುಂಡಿ ಶಿವಕುಮಾರ್, ಮೈಸೂರು

ಸ್ವೀಟ್ ಡ್ರೀಮ್ಸ್ ಬೀಳಲು ಏನು ಮಾಡಬೇಕು ರಾಮ್‌ಜೀ....?

ನಿದ್ರೆ!

ಕೆ.ಎನ್. ಗೋಪಾಲಕೃಷ್ಣ, ಬೆಂಗಳೂರು

ಕುದುರೆಯನ್ನು ಕಡಿವಾಣ ಹಾಕಿ ಹತೋಟಿಗೆ ತರಬಹುದು. ಮನುಷ್ಯನನ್ನು?

ಅವನ ಕೈಯಿಂದ ತಾಳಿ ಕಟ್ಟಿಸಿ; ಮೂಗುದಾರ ತಾನಾಗಿಯೇ ಬೀಳುತ್ತದೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಕೆಟ್ಟವರು ಬಹು ಬೇಗ ಪ್ರಚಾರಕ್ಕೆ ಬರುತ್ತಾರೆ. ಒಳ್ಳೆಯವರು ಬೆಳಕಿಗೆ ಬರುವುದಿಲ್ಲ. ಏನು ಕಾರಣ?

ನಾತ ಲಕ್ಷಣ; ದುರ್ನಾತಕ್ಕೆ ಸುವಾಸನೆಯನ್ನು ಮೆಟ್ಟಿ ಹಬ್ಬುವ ಶಕ್ತಿ ಇರುತ್ತದೆ.

ಪಿ. ಶಂಕರಪ್ಪ, ಶಿವಮೊಗ್ಗ

ಇಂದು ಜನರು ಕುರಿಗಳಾಗುತ್ತಿರುವುದಕ್ಕೆ ಕಾರಣ ಸರ್ಕಾರವೋ, ಅಧಿಕಾರಿಗಳೋ? ಸರಿಯುತ್ತರ ನೀಡದಿದ್ದರೆ ತಲೆ ಹೋಳಾಗಲಿದೆ.

ಎರಡೂ ಅಲ್ಲ; ಕುರಿತು ಕೇಳದೆ ಕುರಿಯಂತೆ ಕೇಳುವ ಜನರೇ.

■ ರಾಮ್